

# ಇಹದ ಪರಿಮಳ

## ಕಾಡ ಹಾದಿಯ ಹೂಗಳು


- ಪ್ರಧಾನ ಸಂಪಾದಕರು : ಡಾ. ಪುರುಷೋತ್ತಮ ಡಿ.
- ಸಂಪಾದಕರು : ಡಾ. ಚಂದ್ರಶೇಖರ ಪಿ.<br>ಕೃ.ಪ. ಗಣೇಶ<br>ಬಸವರಾಜು ಸಿ. ಚೆಟ್ಟಿಹುಂಡಿ


Scanned with OKEN Scanner

**IHADA PARIMALA [ KADA HADIYA HOOGALU] :**
Collection of Articles, Edited by :

**Chief Editor**
**Dr. Purushothama D.**

**Editor**
**Dr. Chandrashekara P**
**Pro. Kru.Pa.Ganesha**
**Basavaraju C. Jettihundi**

Published by :
**Mani Prakashana**
# 560, 12th Main, 20 'B' Cross,
'C' Block, Vijayanagar 3rd Stage,
Mysore-570 030.
Mob : 96865 35465
Email : Maniprakashana@gmail.com

**ISBN : 978-93-84240-54-7**

ಪ್ರಥಮ ಮುದ್ರಣ : 2019
ಪುಟಗಳು : 264
ಹಕ್ಕು : ಲೇಖಕರು
ಬೆಲೆ : ರೂ. 275/-
ಪುಸ್ತಕದ ಅಳತೆ : 1/8 ಡೆಮ್ಮಿ
ಕಾಗದ : 70 ಜಿ.ಎಸ್.ಎಂ.
ಮುಖಪುಟ : ಅರುಣ್‌ಕುಮಾರ್ ಜಿ.
ಡಿ.ಟಿ.ಪಿ. : ಉಮೇಶ್.
ಮುದ್ರಕರು : ಶಾರ್ಪ್ ಎಂಟರ್‌ಪ್ರೈಸೆಸ್, ಮೈಸೂರು.

Scanned with OKEN Scanner

# ಪರಿವಿಡಿ

* ಮಹಾಸಾಗರದ ಮುತ್ತುಗಳು
ಡಾ. ಮಾದಯ್ಯ ಮಾಕನಹಳ್ಳಿ
* ಕನಕದಾಸರ ಪ್ರಸ್ತುತತೆಯ ಹುಡುಕಾಟ
ಡಾ. ಎಸ್. ನರೇಂದ್ರಕುಮಾರ್
* ದಲಿತ ಸಂವೇದನೆಯ ಸಾಂಸ್ಕೃತಿಕ ಸಂಕಥನ
ಡಾ. ಅಪ್ಪಗೆರೆ ಸೋಮಶೇಖರ್
* ಪ್ರೊ. ಕಾಳೇಗೌಡ ನಾಗವಾರ ಅವರ ಕಾಡು ಮತ್ತು ಕೂಡಿಕೆ ಕಥೆಗಳ ಅಧ್ಯಯನ
ಡಾ. ಎಂ.ಬಿ. ಸುರೇಶ
* ಎಂ.ರಾಮಕೃಷ್ಣ ಅವರ ಜೀವನ ಮತ್ತು ಸಾಧನೆ
ಡಾ.ಎನ್.ವೈ. ಶ್ರೀನಿವಾಸಯ್ಯ
* ಬೂಸಾ ಚಳವಳ: ಒಂದು ಒಳನೋಟ
ಡಾ. ಚಂದ್ರಶೇಖರ ಪಿ.
* ಇಮ್ಮಡಿ ಮುರಿಗಾ ಗುರುಸಿದ್ಧ ಸ್ವಾಮಿಗಳ ಸಾಹಿತ್ಯ ಮತ್ತು ಅಭಿವ್ಯಕ್ತಿ
ಡಾ. ಸಿ.ಟಿ. ಜಯಣ್ಣ
* ಕುವೆಂಪು ಅವರ ನಾಟಕಗಳಲ್ಲಿ ಕಂಡುಬರುವ ಶೋಷಿತ ನಾಯಕ ಪಾತ್ರಗಳ ವಿಶ್ಲೇಷಣೆ
ಬಸವರಾಜು ಸಿ. ಜೆಟ್ಟಿಹುಂಡಿ
* ಕರ್ನಾಟಕದಲ್ಲಿ ಕ್ಯಾತಪ್ಪನ ಆರಾಧನಾ ನೆಲೆಗಳು
ಪ್ರೊ. ಜಗನ್ನಾಥ. ಎನ್
* ಬುಡಕಟ್ಟು ಸಮುದಾಯದ ಜಾತ್ರೆಯ ವರ್ತಮಾನದ ತಲ್ಲಣಗಳು
ಡಾ. ಚಿತ್ತಯ್ಯ. ಕೆ
* ಅಬಚೂರಿನ ಪೋಸ್ಟಾಫೀಸು : ಮಹಿಳಾ ನೆಲೆಗಳು
ಡಾ.ಎಂ.ವೈ. ಶಿವರಾಮು
* ಕೃಷಿ ಚರಗದ ಫಲವಂತಿಕೆ ಆಚರಣೆಗಳು
ಪ್ರೊ. ಬಿ. ರೇವಣ್ಣ

* ವಚನ ಸಾಹಿತ್ಯದಲ್ಲಿ ವೈಚಾರಿಕ ನೆಲೆಗಳು

ಪ್ರೊ. ಕೃ.ಪ. ಗಣೇಶ

* ಜಾಗತೀಕರಣ ಮತ್ತು ಬಡತನ : ಡಾ.ಅಂಬೇಡ್ಕರ್ ಅವರ ವಿಚಾರಗಳ ಪ್ರಸ್ತುತತೆ

ಡಾ. ಶಿವಲಿಂಗಪ್ಪ ಆಯ್.ಭಂಡಾರಿ

* ಸಾಂಸ್ಕೃತಿಕ ವೀರ ನಾಯಕ ಮೇದಾರ ಕೇತಯ್ಯ – ಒಂದು ಚಿಂತನೆ

ಪ್ರೊ. ಜಯಶೀಲ ಎಂ.ಎಸ್.

* ಗಿರೀಶ ಕಾರ್ನಾಡರ 'ರಾಕ್ಷಸ ತಂಗಡಿ' : ಚಾರಿತ್ರಿಕ ಅಧ್ಯಯನ

ಪ್ರೊ. ಎಸ್. ಸಿದ್ದೇಗೌಡ

* ಅನಕೃ ಸಾಹಿತ್ಯದ ಮರು ಓದುವಿನ ಹೊಸ ಸಾಧ್ಯತೆಗಳು

ಪ್ರೊ. ಮಹೇಶ ಎಂ.ಕೆ

* ನೇಮಿಚಂದ್ರ ಅವರ ಕಥಾ ಸಾಹಿತ್ಯ

ವೈ.ಪಿ. ರಮ್ಯ

* ಕತ್ತಲ ಲೋಕದ ಕಾರುಣ್ಯ ಮೂರ್ತಿ ಪರಂಜ್ಯೋತಿ ಮಂಟೇಸ್ವಾಮಿ

ಡಾ. ಪಿ. ಮಣಿ

* ಕನ್ನಡ ಗಾದೆಗಳಲ್ಲಿ 'ಪ್ರತಿಮೆ'

ಪ್ರೊ. ಸುಂದರಿ ಡಿ.

* ಕನ್ನಡ ದಿನಪತ್ರಿಕೆಗಳಲ್ಲಿ ಕ್ರೀಡಾ ವರದಿ: ಒಂದು ವಿಶ್ಲೇಷಣಾತ್ಮಕ ಅಧ್ಯಯನ

ಡಾ. ರಾಘವೇಂದ್ರ ಎಸ್.ಜಿ.

* ಪಂಪ-ರನ್ನರ ಕಾವ್ಯಗಳಲ್ಲಿ ಪ್ರಜಾಸತ್ತಾತ್ಮಕ ಧೋರಣೆಗಳು

ಡಾ. ತಿಪ್ಪೇಸ್ವಾಮಿ ಡಿ.ಎಸ್

* ಕುವೆಂಪು ಅವರಿಗಾದ ಪ್ರಭಾವ ಮತ್ತು ಪ್ರೇರಣೆಗಳು

ಡಾ. ಪುರುಷೋತ್ತಮ ಡಿ.

* ವಚನಗಳಿಗೂ ಮತ್ತು ಜಿ.ಎಸ್.ಶಿವರುದ್ರಪ್ಪನವರ ಕಾವ್ಯದ ಕೆಲವು ಕವನಗಳಿಗೂ ತೌಲನಿಕ ವಿವೇಚನೆ

ಡಾ. ಅಶೋಕ ಜಿ.ಎಸ್.


Scanned with OKEN Scanner

Title- Democratic Ideas in Pampa-Ranna's Poetries
- Dr. Thippeswamy D.S.

# ಪಂಪ-ರನ್ನರ ಕಾವ್ಯಗಳಲ್ಲಿ ಪ್ರಜಾಸತ್ತಾತ್ಮಕ ಧೋರಣೆಗಳು

- ಡಾ. ತಿಪ್ಪೇಸ್ವಾಮಿ ಡಿ. ಎಸ್

ಪ್ರಾಚೀನ ಕರ್ನಾಟಕದ ಅರಸು ಮನೆತನಗಳಿಗೂ ಕನ್ನಡ ಸಾಹಿತ್ಯಕ್ಕೂ ಇರುವ ನಂಟು ತುಂಬ ಗಾಢವಾದುದು. ಅಂತೆಯೇ 'ಕರ್ನಾಟಕದ ಅರಸು ಮನೆತನಗಳು ಇತಿಹಾಸವೆಂದರೆ, ಸ್ಥೂಲವಾಗಿ ಕನ್ನಡ ಸಾಹಿತ್ಯದ ಇತಿಹಾಸ' ಎಂಬ ವಿದ್ವಾಂಸರ ಮಾತು ಸತ್ಯ. ಸಾಹಿತ್ಯಕ್ಕೆ ರಾಜಕೀಯವು ಆಶ್ರಯವಾಗಿದ್ದುದೂ, ರಾಜಕೀಯಕ್ಕೆ ಸಾಹಿತ್ಯವು ಮುಖವಾಣಿಯಾಗಿದ್ದುದೂ ಈ ಸ್ನೇಹ ಸಂಬಂಧದ ರಹಸ್ಯ. ರಾಜಾಶ್ರಯದ ಈ ಪ್ರಕ್ರಿಯೆಯಿಂದಾಗಿಯೇ ಚಾಲುಕ್ಯ ಅರಿಕೇಸರಿ ಮತ್ತು ಮಹಾಕವಿ ಪಂಪ ಇವರಿಬ್ಬರೂ ಸ್ನೇಹಿತರಾದುದು.

ಸಾಮ್ರಾಜ್ಯಶಾಹಿ ಧೋರಣೆಯ ಆಶ್ರಯದಲ್ಲಿ ಪಂಪ ಬದುಕಿದ್ದನೆಂಬುದು ನಿರ್ವಿವಾದವಾದರೂ ಆತ ಅದನ್ನು ತತ್ವಶ: ಒಪ್ಪಿದ್ದನೆಂದು ಹೇಳುವುದು ಸೂಕ್ತವಾಗಲಾರದು. ವಿಬುಧಾಶ್ರಯನೆನ್ನಿಸಿದ ಅರಿಕೇಸರಿ ತನ್ನ ಸದ್ಗುಣ ಸುಶೀಲಗಳಿಂದ ಪಂಪ ಮನಸ್ಸನ್ನು ಗೆದ್ದಿದ್ದಾನೆ ಈ ದೊರೆಯ ಸಂಪರ್ಕದಿಂದಾಗಿ ಅಂದಿನ ರಾಜಕೀಯ ರಂಗದ ನಿಕಟ ಸಂಪರ್ಕ ಪಡೆದ ಪಂಪ, ತನಗೆ ಆಕರವಾದ ಮಹಾಭಾರತ ಕೃತಿಯಲ್ಲಿ ಬಂದಿರುವ ಹಲವಾರು ರಾಜನೈತಿಕ ವಿಚಾರಗಳೊಂದಿಗೆ, ತಾನು ಕಣ್ಣಾರೆ ಕಂಡ ಅನುಭವಿಸಿದ ಆಚರಿಸಿದ ಹಲವಾರು ಸರ್ವಕಾಲೀನ ರಾಜನೈತಿಕ ವಿಚಾರಗಳನ್ನೂ ತನ್ನ ಕೃತಿಯಲ್ಲಿ ಸೇರಿಸಿದ್ದಾನೆ. ಇದರಿಂದಾಗಿ ರಾಜರ ಇಡೀ ವ್ಯಕ್ತಿತ್ವವನ್ನು ಪಂಪ ತನ್ನ ಕೃತಿಯಲ್ಲಿ ವಿಮರ್ಶಾತ್ಮಕವಾಗಿ ನಿರೂಪಿಸಿದಂತಾಗಿದೆ.

'ರಾಜಾಕಾಲಸ್ಯ ಕಾರಣಂ' ಯಥಾ ರಾಜಾ ತಥಾ ಪ್ರಜಾ ಎಂಬೆಲ್ಲ ಮಾತುಗಳ ಮೂಲಕ ಪ್ರಾಚೀನ ಭಾರತದಲ್ಲಿ ರಾಜರು ಹೊಂದಿದ ಸಾಮಾಜಿಕ ಮಹತ್ವವನ್ನು

Scanned with OKEN Scanner

ನಾವು ಅರ್ಥೈಸಿಕೊಳ್ಳಬಹುದು. ಹೀಗೆ ಶೌರ್ಯ-ಶೀಲಾದಿಗುಣಗಳಲ್ಲಿ ಪ್ರಪ್ರಥಮ ಆದರ್ಶನೆನ್ನಿಸಿಕೊಂಡ ರಾಜ ಆ ದೆಸೆಯಲ್ಲಿ ತನ್ನದೇ ಆದ ಕೆಲವು ತಾತ್ವಿಕ ಹಾಗೂ ಸಾತ್ವಿಕವಾದ ನೀತಿ-ನೀಲುವುಗಳನ್ನು ಹೊಂದಿರುವುದು ಅವಶ್ಯಕವಾಗಿರುತ್ತಿದ್ದಿತು. ವೈಯಕ್ತಿಕವಾಗಿ ತಾನು ಭದ್ರವಾದ ನೈತಿಕ ನೆಲೆಗಟ್ಟನ್ನು ಪಡೆದ ರಾಜ, ರಾಜ್ಯದ ರಾಜಕೀಯ ಆರ್ಥಿಕ, ಧಾರ್ಮಿಕ, ಸಾಮಾಜಿಕ ವ್ಯವಹಾರಗಳ ಸೂತ್ರ ಹಿಡಿಯಬೇಕಾಗುತ್ತಿದ್ದಿತು. ಇದನ್ನರಿತ ಅಂದಂದಿನ ಕವಿಗಳು ಸ್ವಾಭಾವಿಕವಾಗಿ ತಮ್ಮ ಕೃತಿಗಳಲ್ಲಿ ಅನೇಕ ರಾಜನೈತಿಕ ವಿಷಯಗಳಿಗೆ ಎಡೆಕೊಟ್ಟರು. ಮಹಾಭಾರತ ಮತ್ತು ಅದನ್ನನುಸರಿಸಿದ ಪಂಪಭಾರತಗಳೂ ಈ ಮಾತಿಗೆ ಹೊರತಾಗಿಲ್ಲ.

-೨-

ಒತ್ತಿ ತರುಂಬಿನಿಂದ ರಿಪ್ರಭೂಜಸಮಾಜದ ಬೇರ್ಗಂಳಂನಭ
ಕ್ಕೆತ್ತದೆ ಬಂದು ತನ್ನ ಮೊರೆವೊಕ್ಕೊಡೆ ಕಾಯದೆ ಚಾಗದೊಳ್ಪಿನ
ಚ್ಚೊತ್ತದೆ ಮಾಣ್ದು ಬಾಳ್ವ ಪುಳುವಾನಸನೆಂಬಚಾಂಡಮೆಂಬುದೊಂ
ದತ್ತಿಯ ಪಣ್ಣೊಳಿರ್ಪ ಪುಳುವಲ್ಲದೆ ಮಾನಸನೇ ಮುರಾಂತಕಾ

ಇಲ್ಲಿ ಕವಿಯೂ ಶೌರ್ಯ-ಶರಣಾಗತ ರಕ್ಷಣೆ-ತ್ಯಾಗಗಳೆಂಬ ಮೂರು ಗುಣಗಳ ರಾಜರಿಗಿರಬೇಕಾದ ಬೆಳಕು ಚೆಲ್ಲಿದ್ದಾನೆ. ಅವನು ಸಾಮ್ರಾಜ್ಯಶಾಹಿ ವ್ಯವಸ್ಥೆಯ ದೋಷಗಳನ್ನು ಪ್ರಶ್ನಿಸಿದ್ದನೆಂಬುದಕ್ಕೆ ಇಂಥ ಮಾತುಗಳು ಸಾಕ್ಷಿ. ಮೇಲಿನ ಈ ಮಾತನ್ನೇ ಸೂತ್ರರೂಪದಲ್ಲಿ 'ಈಯಲ್ ಇರಿಯಲ್ ಶರಣ್ಬುಗೆ ಕಾಯಲ್ ಕ್ಷತ್ರೀಯರೆ ಬಲ್ಲರ್ ಎಂದಿದ್ದಾನೆ. ರನ್ನ ಇಂಥ ಮಾತುಗಳಲ್ಲಿ ರಾಜರ ವ್ಯಕ್ತಿತ್ವದ ಪರಿಚಯವಾಗುತ್ತದೆ.

ರಾಜರಾದವರು ಬಾಲ್ಯದಲ್ಲಿ ಮಾಡಬೇಕಾಗಿದ್ದ ವಿದ್ಯಾಭ್ಯಾಸದ ದೀರ್ಘ ವಿವರಣೆ ಪಂಪನಲ್ಲಿದೆ. ವ್ಯಾಪಕವಾಗಿದ್ದ ಈ ಅಭ್ಯಾಸಕ್ರಮ ಕೇವಲ ಪಂಪನ ಕಾಲದ್ದಾಗಿರದೆ ಪಾರಂಪರಿಕ ಹೇಳಿಕೆ ಎನ್ನಬೇಕಾಗುತ್ತದೆ.

ಸಾಮಾನ್ಯ ರಾಜನೈತಿಕ ವಿಚಾರಗಳನ್ನು ಗಮನಿಸಿದ್ದಾಗ ಪಂಪಭಾರತದಲ್ಲಿ ನೀತಿಶಾಸ್ತ್ರ ಅರ್ಥಶಾಸ್ತ್ರಗಳಿಗೆ ಸಂಬಂಧಿಸಿದ ಅನೇಕ ವಿಚಾರಗಳು ಬಂದಿದ್ದು, ಅವುಗಳಲ್ಲಿ ಹೆಚ್ಚಿನವುಗಳೆಲ್ಲ ಪುರಾತನೋಕ್ತವಾದವು. ಅವುಗಳನ್ನು ಪಂಪ ತನ್ನ ಸಂದರ್ಭಗಳಿಗೆ ಅನ್ವಯಿಸಿಕೊಂಡಿದ್ದಾನೆ. ಇವೆಲ್ಲ ಹೆಚ್ಚಾಗಿ ಸಾರ್ವತ್ರಿಕವೂ ಸಾರ್ವಕಾಲೀನವೂ ಆಗಿರುವವೆಂಬುದನ್ನು ಗಮನಿಸಬೇಕು. ಇವು ರಾಜರಿಗೆ ಅವಶ್ಯವಾದ ಮಾರ್ಗದರ್ಶಕ ಸೂತ್ರಗಳಾಗಿದ್ದವೆನ್ನಬಹುದು. ರಾಜರು ತಮ್ಮ ಜಟಿಲ ಹಾಗೂ ಜವಾಬ್ದಾರಿಯುತವಾದ

Scanned with OKEN Scanner

ಜೀವನದುದ್ದಕ್ಕೂ ಪ್ರಸಂಗಾನುಸಾರವಾಗಿ ಪಾಲಿಸಬೇಕಾದ ಕರ್ತವ್ಯ ಹಾಗೂ ನೀತಿಗಳ ಸೂಚನೆ ಈ ಮಾತುಗಳಲ್ಲಿವೆ.

ಎಷ್ಟೇ ಬಲಿಷ್ಠನಾಗಿದ್ದರೂ ರಾಜ ತಾನೊಬ್ಬನೇ ಕಾರ್ಯಪ್ರವೃತ್ತನಾಗದೇ ಮಹತ್ವದ ಪ್ರಸಂಗಗಳಲ್ಲಿ ತನ್ನವರೊಂದಿಗೆ ಅಂದರೆ ಮಂತ್ರಿ, ಸೇನಾಪತಿ, ರಾಜಗುರು, ಕೋಶಾಧಿಕಾರಿ ಮುಂತಾದವರು ಜೊತೆಗೆ ಚರ್ಚೆ ಮಾಡುತ್ತಿದ್ದುದರ ಬಗ್ಗೆ ತಿಳಿದು ಬರುತ್ತದೆ. ಅದನ್ನೇ ಅಂದು 'ಮಂತಣ ಮಂತ್ರಾಲೋಚನೆ' ಎಂದು ಕರೆಯಲಾಗುತ್ತಿತ್ತು. ಅಂಥ ಚರ್ಚೆ ನಡೆಯುವ ರಹಸ್ಯತಾಣವನ್ನು ಮಂತ್ರಶಾಲೆ ಎಂದು ಕರೆಯುತ್ತಿದ್ದರು. ದುರ್ಯೋಧನ ತನ್ನವರೊಂದಿಗೆ ನಡೆಸಿದ ಮಂತ್ರಾಲೋಚನೆಯು ಒಂದು ಪ್ರಸಂಗವನ್ನಿಲ್ಲಿ ನೋಡಬಹುದು. ' ಆಗಿ ದುಶ್ಯಾಸನ ಕರ್ಣ ಶಕುನಿ ಸೈಂಧವರೆಂಬ ದುಷ್ಟಚತುಷ್ಟಯದೊಳ್ ಮಂತಣಮಿರ್ದು

–೩–

ರಾಜನ ಸಂದೇಹಗಳಿಗೆ ಬಲ್ಲವರು ದಾರಿತೋರುವುದು, ಸಮಾಧಾನ ಹೇಳುವುದು ಸಾಮಾನ್ಯ ಪದ್ಧತಿ ದುರ್ಯೋಧನನಿಗೆ ಶಕುನಿ ತೋರಿದ ದಾರಿ.

ಕರೆದೊಡೆ ಜೂದಿಂಗಂ ಧುರ
ಭರಕಾಖೇಟಕ್ಕೆ ಭೂಭುಜಂಗಾಗದು ಮೆ
ಯ್ಗರೆದಿರಲೆಂಬ ಪುರಾತನ
ಗುರುವಚನಂ ತನಗೆ ನಿಟ್ಟೆಪಟ್ಟುದರಿಂದಂ

ಎಂಬುದೊಂದು ನಿದರ್ಶನ ರಾಜನಾದವನು ಯುದ್ಧ–ಜೂಜುಗಳಿಗಾಗಿ ಬಂದ ಇನ್ನೋಬ್ಬರ ಅಹ್ವಾನವನ್ನು ಎಂದೂ ತಿರಸ್ಕರಿಸಲಾರ ಎಂಬ ಪುರಾತನ ನೀತಿಯ ಹಿನ್ನಲೆಯಲ್ಲಿ ದುರ್ಯೋಧನನು ಧರ್ಮರಾಜನನ್ನು ಜೂಜಿಗೆ ಆಹ್ವಾನಿಸುವಂತೆ ಶಕುನಿ ಇಲ್ಲಿ ಪ್ರೇರೇಪಿಸಿದ್ದಾನೆ. ಭೀಕರ ಕ್ಷಾಮ, ಪದೇ ಪದೇ ಜರುಗುತ್ತಿದ್ದ ಯುದ್ಧ, ಯಾವಾಗಲೂ ಇರುತ್ತಿದ್ದ ಅಂತಃಕಲಹ ಈ ಮುಂತಾದ ಪ್ರಸಂಗಗಳಲ್ಲಿಯಂತೂ ಇಂಥ ಮಂತ್ರಾಲೋಚನೆ ರಾಜನಿಗೆ ಅನಿವಾರ್ಯವಾಗುತ್ತಿದ್ದಿತು.

ಪುರದೇವಾದಿಜಿನೇಂದ್ರಮಾಲೆ ಗಣಭೃತ್ಸಂತಾನಮಂದೀಪರಂ
ಪರೆಯಿಂ ವಿಶ್ರುತವೀರಸೇನ ಜಿನಸೇನಾಚಾರ್ಯ್ಯಪರ್ಯಂತಮಾ
ಗಿರೆ ಬಂದೀ ಕಥೆಗುಣ್ಬುವೆತ್ತುದವರುಂ ಜ್ಞಾನರ್ದ್ಧಿಸಂಪನ್ನರೆಂ
ದಿರಬಾಂಧ್ನಷ್ಟನೆ ನೀಕಥಾಬ್ಧಿಯುಮನೇನೀಸಲ್ ಮನಂದಂದೆನೋ

ಶ್ರದ್ಧಾಭಕ್ತಿಗಳಿಂದ ಕೂಡಿದ ಪಂಪನ ಮನಸ್ಸು ಎಷ್ಟು ವಿನಯ ಪರವಾಗಿದೆಯೆಂಬುದನ್ನು ಇಲ್ಲಿ ಕಾಣಬಹುದು. ಪ್ರಕೃತದಲ್ಲಿ ಪಂಪನ ದೈವದತ್ತವಾದ ಕಾವ್ಯ ಪ್ರತಿಭೆ ಜೈನಧರ್ಮದ ಹಿರಿಮೆ ಗರಿಮೆಗಳನ್ನು ರಸವತ್ತಾಗಿ ಚಿತ್ರಿಸುವುದರಲ್ಲಿ ಹೇಗೆ ಶಕ್ತವಾಗಿದೆಯೆಂಬುದನ್ನು ಪರಿಶೀಲಿಸುವುದು ಕಾಣುತ್ತದೆ. ಪಂಪನು, ಜೈನಧರ್ಮದ ತತ್ವಗಳನ್ನು ಸಾರಿ ಹೇಳುವ ಪ್ರಚಾರಕನಾಗದೆ, ಕಡೆಯವರೆಗೂ ಅವುಗಳನ್ನು ಸಹಜ ಸುಂದರವಾಗಿ ಇತರ ಮತೀಯರಿಗೂ ಪ್ರೀಯವಾಗುವಂತೆ ತಿಳಿಯ ಹೇಳುವ ಕುಶಲ ಕವಿಯಾಗಿರುವುದು ಗಮನಾರ್ಹವಾದ ಸಂಗತಿ. ಕವಿಯ ಸ್ವಧರ್ಮ ಮತ್ತು ಮನೋಧರ್ಮಗಳೆರಡೂ ಅವಳಿಜವಳಿಗಳಂತೆಯೇ, ಒಂದು ನಾಣ್ಯದ ಎರಡು ಮುಖಗಳಂತೆಯೇ ಪರಸ್ಪರ ಪೂರಕವಾಗಿರುವುದರಿಂದಲೇ ಅವನ ಜಿನಾಗಮ ಪ್ರತಿಪಾದನೆ ಕನ್ನಡಿಗರಿಗೆ ರಸದೌತಣವೆನ್ನಿಸಿರುವುದಲ್ಲದೆ, ಮಾನವ ಜೀವನದ ಉನ್ನತಿ ಅವನತಿಗಳನ್ನು ಜೀವಂತವಾಗಿ ಚಿತ್ರಿಸುವ ವಾಕ್ಯ

–೪–

ಮಾಣಿಕ್ಯ ಕೋಶವೂ ಆಗಿದೆ. ಪಂಪನ ಮಾತನ್ನೇ ಉದಾಹರಿಸುವುದಾದರೆ ಅವನ ಚೊಚ್ಚಲ ಕೃತಿಯಾದ 'ಆದಿಪುರಾಣ' 'ಸುಕವಿಪ್ರಮೋದಪುದಂ' ಸಮಸ್ತಭವ್ಯಲೋಕ ಪ್ರಮುದ ಪುದಂ ಆದ್ದರಿಂದ 'ನೆಗಱ್ದುದಿ ಪುರಾಣದೊಳಱಿವುದು ಕಾವ್ಯಧರ್ಮಮಂ ಧರ್ಮಮುಮಂ' ಎಂದು ತಾನು ಹಾಕಿಕೊಂಡಿರುವ ಮೇಲು ಪಂಕ್ತಿಯನ್ನು ಪ್ರಥಮ ಆಶ್ವಾಸದ ಮುಂಬಾಗಿಲಿಗೆ ತೋರಣದಂತೆ ತೂಗುಹಾಕಿದ್ದಾನೆ, ಆದಿಪುರಾಣವನ್ನು ಬರೆಯುವ ಕಾಲಕ್ಕೆ ಪಂಪನ್ನು ಇನ್ನೂ ಪ್ರಾಯದ ಯುವಕನೇ ಸರಿ. ಆದರೆ, ಅವನ ಮನಸ್ಸು ಅ ವೇಳೆಗಾಗಲೇ

ಸಾಕಷ್ಟು ಹದವಾಗಿತ್ತು. ಪಾಂಡಿತ್ಯದ ಉರುಖಿಗೆಸಿಕ್ಕಿ ಉಸಿರು ಕಟ್ಟಿಸುವ ಪಂಡಿತನವನಲ್ಲ ಇರು ಮರುಳೆ ಶುಷ್ಕ ವೈಯಾಕರಣಂಗಂ ಶುಷ್ಕ ತಾರ್ಕಿಗಂಗಂ ಬೆಳ್ಳಕ್ಕರಿಗಂಗಂ ವಿಷಯವಮೆ ಕಾವ್ಯರತ್ನಮತಿ ಚತುರ ಕವಿ ಕದಂಬಕ ವಿಷಯಂ' ಎಂದು ಹೇಳುವ ಈ ಧೀರ ತಾರ್ಕಿಗಂಗಂ ಬೆಳ್ಳಕ್ಕರಿಗಂಗಂ ವಿಷಯವಮೆ ಕಾವ್ಯರತ್ನಮತಿ ಚತುರ ಕವಿ ಕದಂಬಕ ವಿಷಯಂ' ಎಂದು ಹೇಳುವ ಈ ಧೀರ ಆದಿಪುರಾಣದಲ್ಲಿನ ರಸಸ್ಥಾನಗಳನ್ನು ಮನಗಂಡು ಹೇಗೆ ಕಾವ್ಯಧರ್ಮ ಮತ್ತು ಜಿನಧರ್ಮಗಳ ಸಮನ್ವಯವನ್ನು ಸಾಧಿಸಿದ್ದಾನೆಂಬುದನ್ನು ಅರಿತರೆ ಈ ಅದ್ವಿತೀಯ ಚಂಪೂಕವಿಯ ಪ್ರತಿಭೆಯೇನು ಎನ್ನುವದು ವ್ಯಕ್ತವಾಗುತ್ತದೆ.

Scanned with OKEN Scanner

ಪಂಪನಿಗೆ ಒಂದೇ ಸಮಾಧಾನ ಆಸುಖ ಜೀವಿಗಳು ಮುನ್ನಿನಂತೆ ವಿಯೋಗಕ್ಕೆ ಪಕ್ಕಾಗದೆ ಸಂತೋಷದಿಂದ ಒಡಗೂಡಿರುವ ಕಾಲದಲ್ಲಿ ಒಟ್ಟಿಗೆ ಸಾವನ್ನು ಪಡೆದರು. ಅದು ಒಂದು ಪುಣ್ಯವೇ ಸರಿ. ಆದ್ದರಿಂದ ಅವರ ಸಲುವಾಗಿ ಪಂಪ ಪ್ರಶಸ್ತಿ ವಾಕ್ಯ ಇಂತಿದೆ.

ಬಿಡದೆ ಪೊಗೆ ಸುತ್ತಿತ್ತೋಳಂ
ಸಡಿಲಿಸದಾ ಪ್ರಾಣವಲ್ಲಭರ್ ಪ್ರಾಣಮನಂ
ದೊಡಗಳೆದರೋಪರೋಪರೊ
ಳೊಡೆ ಸಾಯಲ್ಪಡೆದರಿನ್ನವೇಂ ಸೈಪೊಳವೇ?

ಆದರೆ ಈ ಘಟನೆಯ ಪರಿಶೀಲನೆ ಇಷ್ಟಕ್ಕೆ ನಿಲ್ಲುವುದಿಲ್ಲ. ಇದು ಕೇವಲ ವಜ್ರಜಂಘ–ಶ್ರೀಮಂತರ ಸಾವಿನ ಸಂಗತಿಯಾಯಿತು. ಇದರ ಮಥಿತಾರ್ಥವೇನು? ಧಾರ್ಮಿಕ ತತ್ವವೇನು? ಪಂಪನ ಮನಸ್ಸು ಅದನ್ನು ಹೇಗೆ ನಿರ್ಣಯಿಸುತ್ತದೆ.

ಭೋಗಾಂಗಮಾಗಿಯುಂ ಕೃ
ಷ್ಣಾಗರುಧೂಪಂ ಮುಸುಂಕಿ ಕೊಂದಿಕ್ಕಿದುದಾ
ಭೋಗಿಗಳ ನಿಂತು ಸಂಸ್ಕೃತಿ ಭೋಗಂಗಳ್
ಭೋಗಿಭೋಗದಿಂ ವಿಷಯಂಗಳ್

–೫–

ಯಾವುದೇ ಭೋಗವಸ್ತುವೋ ಅದೇ ವಿಷಸರ್ಪದ ಭೋಗದಂತೆ ಅಪಾಯಕಾರಿಯೂ ಆಗಬಲ್ಲದೆಂಬ ತಿಳುವಳಿಕೆ ಸರ್ವಗ್ರಾಹ್ಯವಾದದ್ದು.ಈ ರೀತಿಯ ಪಂಪನ ನೀತಿ ನಿರೂಪಣೆಯಾಗಲಿ, ಧರ್ಮ ಶ್ರವಣವಾಗಲಿ ಕಾವ್ಯದ ಸರಣಿಯ ಮೂಲಕ ವಿದಿತವಾಗುವುದರಿಂದ ಅದು ಬಲತ್ಕಾರದ ಭೋಧೆಯೆನ್ನಿಸುವುದಿಲ್ಲ ಚಿತ್ತಾಕರ್ಷಕವಾದ ರಸಾನುಭವವೆನ್ನಿಸುತ್ತದೆ.

ಇದೇ ಬಗೆಯಾಗಿ ಆದಿತೀರ್ಥಂಕರನ ಪೂರ್ವ ಭವಾವಳಿಯ ಒಂದೊಂದು ಸನ್ನಿವೇಶದಲ್ಲಿಯೂ ಮೊದಲು ಪ್ರಕೃತಿ ಸಹಜವಾದ ಭೋಗಕಾಂಕ್ಷೆಯು ತಾನೇ ತಾನಾಗಿ ಮೆರೆದು, ಕಡೆಗೆ ಅದು ವೈರಾಗ್ಯ ಮುಖವಾಗುತ್ತದೆ ಮೂಲಕ್ಕನುಸಾರವಾಗಿ ಕಥೆಯ ಜಾಡಿನಲ್ಲಿಯೇ ನಡೆದು ಪಂಪನು ಈ ಭವಾವಳಿಗಳಲ್ಲಿ ಹುದುಗಿರುವ ರಸಸ್ಥಾನಗಳನ್ನು ಗುರುತಿಸಿ, ವಿವರಿಸಿ, ಮಧ್ಯ ಮಧ್ಯ ಧರ್ಮ ಸಂಬಂಧವಾದ ಇತರ ತತ್ವಗಳನ್ನು ಸಮೀಕರಿಸಿ ಬಹುಮಟ್ಟಿಗೆ ತನ್ನ ಗುರಿಯನ್ನು ಸಾಧಿಸಿದ್ದಾನೆ. ಪ್ರಮುಖ ಕಥಾನಾಯಕನ

ಜೀವನ ಮನೆಯಿಂದ ಮನೆಗೆ ಹೋಗುವಂತೆ, ಒಂದು ಭವದಿಂದ ಮತ್ತೊಂದು ಭವಕ್ಕೆ ಸಾಗುವ ಸಂದರ್ಭಗಳು ರಮಣೀಯವಾಗಿವೆ.

ರನ್ನನು ಅಜಿತಪುರಾಣ ಕೃತಿಯನ್ನು ರಚಿಸುವಲ್ಲಿ ಅಜಿತ್‌ಸೇನಾಚಾರ್ಯರಲ್ಲಿ ಗಳಿಸಿದ ಅಧ್ಯಾತ್ಮಿಕ ಜ್ಞಾನವನ್ನು ಇಲ್ಲಿ ಪ್ರಕಟಿಸಿರುವನೆನ್ನಬಹುದು. ಜೈನಪುರಾಣದ ಚೌಕಟ್ಟಿಗೆ ತಕ್ಕಂತೆ ' ಅಜಿತ ಪುರಾಣದ ಉದ್ದಕ್ಕೂ ಜೈನಮತ ಪ್ರಕ್ರಿಯೆಗಳ ಧಾರಾವರ್ಷವಾಗಿದೆ,

ಅಜಿತತೀರ್ಥಂಕರನ ಪಂಚಕಲ್ಯಾಣಗಳ ವರ್ಣನೆಗಳಲ್ಲಿ ಈ ಜೈನಮತ ಪ್ರಕ್ರಿಯೆ ಕಥೆಗೆ ಹಾಸುಹೊಕ್ಕಾಗಿ ಬಂದರೆ, ಮುಂದೆ ಅದು ಪಾರಿಭಾಷಿಕ ಪ್ರಕ್ರಿಯೆಗಳಿಂದ ತಾನೇ ತಾನಾಗಿ ನಿಬಿಡವಾಗುತ್ತಾ ಹೋಗಿ, ಕವಿಯ ಆಶಯಕ್ಕೆ ತಕ್ಕಂಕೆ ಆತನ ಕೃತಿಯನ್ನು ಪುರಾಣತಿಲಕವಾಗಿಸಿದೆ. ದೀರ್ಘವಾದ ಗದ್ಯಭಾಗಗಳಲ್ಲಿ ಆ ಪ್ರಕ್ರಿಯೆಗಳು ಎಡೆ ಪಡೆದಿವೆ. ಅಜಿತನಿಗಾಗಿ ನಿರ್ಮಿಸಿದ ಸಮವರಸಣ ಮಂಟಪದ ವಿಸ್ತೃತವಾದ ವರ್ಣನೆಯನ್ನಾಗಲಿ, ಭಗೀರಥನು ದೃಢಧರ್ಮದ ಬಳಿಗೆ ಬಂದು ಧರ್ಮ ಶ್ರವಣವನ್ನು ಮಾಡುವಲ್ಲಿ ನಿರೂಪಿತನಾಗಿರುವ ಲೋಕಾಕಾರಕಥನವನ್ನಾಗಲಿ ಗಮನಿಸಿದರೆ, ಇದು ತಿಳಿಯುತ್ತದೆ. ಯಾವ ಒಂದು ಜೈನಪುರಾಣವನ್ನೇ ಆಗಲಿ ಅಭ್ಯಾಸ ಮಾಡಿದಾಗ ಜೈನಧರ್ಮದ ಸ್ವರೂಪ ಸಮಗ್ರವಾಗಿ ಅರಿವಾಗಬೇಕೆಂಬುದೇ ಆ ಪುರಾಣ ಕರ್ತೃಗಳ ಇಷ್ಟವಾದುದರಿಂದ ಇನ್ನು ನಾವು ನೀರಸವೆಂದಾಗಲಿ, ನಿರುಪಯುಕ್ತವೆಂದಾಗಲಿ ಆಕ್ಷೇಪಿಸುವಂತಿಲ್ಲ.

'ಪೆಜವೊಳವುಳ್ಳುವಿಲ್ಲಯೊಳವಾಗಮ ಭಾಷೆಗಳಿಲ್ಲಿಯುಳ್ಳುವಂ ಪೆಜವುಳಿ ಕಾಣಲಾಗುದು ಎಂದು ರನ್ನನೇ ಹೇಳಿಕೊಂಡಿದ್ದಾನೆ.

—೬—

ಕಾವ್ಯ ದೃಷ್ಟಿಯಿಂದ ಪರಿಶೀಲಿಸಿದಾಗ ರನ್ನನ ಪ್ರತಿಭೆಯ ಪ್ರಕಾಶ ಪಂಪನಲ್ಲಿ ತೋರುವಂತೆ ಉಜ್ವಲವಾಗಿ ತೋರುದಿದ್ದರೂ ಅವನ ಕವಿತಾ ಶಕ್ತಿಯ ಉತ್ಕೃಷ್ಟತೆಗೆ ಸಾಕಷ್ಟು ನಿದರ್ಶನಗಳಿವೆ. ಪಟ್ಟಾಭಿಷಕ್ತನಾದ ಅಜಿತನನ್ನು ದೇವೆಂದ್ರನು ಹೇಗೆ ಓಲೈಸಿದನೊ. ಅಂತೆಯೇ ವಸಂತ ಋತುವೂ ಮನ್ಮಥನ ನೇತೃತ್ವದಲ್ಲಿ ವೈಭವವನ್ನೂ ಬೀರಿ

ತನ್ನ ಸೇವೆ ಸಲ್ಲಿಸಿತೆಂಬ ನಿರೂಪಣೆ ಮನೋಜ್ಞವಾದ್ದು.

ನಾನಾ ಹಕ್ಕಿಗಳ ಸೊಕ್ಕೇರಿದ ಧ್ವನಿ, 'ಮದನನ್ನಪ ನಾಟಕ ವಿಜಯಾನಕರವ' ದಂತೆ ತೋರಿಬಂದಿತಂತೆ 'ಮನೋಜಮನೋರಥದ್ರುವ' ವಸಂತ ಮಾಸನಿಮಿತ್ತವಾಗಿ ಶೋಭಿಸಲಾರಂಭಿಸಿತಂತೆ ಮನ್ಮಥನು ತನ್ನ ಬಳಗದ ಯೋಗಕ್ಷೇಮವನ್ನು ಈ ರೀತಿ ವಿಚಾರಿಸಿಕೊಂಡನಂತೆ.

Scanned with OKEN Scanner

ಬಂದಿರೆ ಮಾಮರಂಗಳಿರ ಮಲ್ಲಿಗೆ ಬಂದಿರೆ ಕೋಕಿಲಾಳಿನೀ
ವೃಂದಮೆ ಬನ್ನಿ ಮಿತ್ತ ಶುಕನೀಂ ಸೊಕಮೇರಜನೀಂದ್ರ ಚಂದ್ರಸ್ಯೆ
ಪಿಂದಮೆ ಬಂದಿರೇ ಕುಶಲಮೇ ನಿಮಗೆಂದು ಮಧುಪ್ರವೇಸದೊಳ್
ಬಂದು ಮನೋಜನೇನನಿತುಮಂ ಪೆಸರ್ಗೊಂಡನೊ ಕೂಡಿಕೊಂಡನೋ॥

ವಿಯೋಗಿಗಳಿಗೆ ವಸಂತಮಾಸವು ಹೇಗೆ ಸಿಂಹಸದೃಶವಾಯಿತೆಂಬುದನ್ನು ಕವಿ ಹೀಗೆ ಚಿತ್ರಿಸುತ್ತಾನೆ. ಈ ಪದ್ಯ ಈಚೀನ ಕನ್ನಡ ಲಾಕ್ಷಣಿಕರಿಗೂ ಸಂಕಲನ ಗ್ರಂಥಕಾರರಿಗೂ ಮೆಚ್ಚಾಗಿರುವುದನ್ನು ಗಮನಿಸಬೇಕು.

ಬೆಳಗಿದ ಮಣಿದರ್ಪಣಮಂ
ಘಳಿದ ಸರೋವರಮನಿಜೆಸಿ ನಿರ್ಮಳಮದೆ ನಿ
ರ್ಮಳಿನತರಮಾಯ್ತು ಜಗತೀ
ತಿಳಿಕನ ನೆಗವ್ದಿಜಿತಜಿನನ ಚಿತ್ತಮುದಾತ್ತಂ॥

ಮಹಾರಾಜನಾಗಿದ್ದ, ಸಾಮ್ರಾಜ್ಯದೀಕ್ಷಾಗುರುವಾಗಿದ್ದ ಅಜಿತನು ' ತಾಳಲ್ ದೀಕ್ಷೆಯಂ ಭೋಂಕನೆ ತಳರ್ದನಯೋಧ್ಯಾಪುರೀ ಮಧ್ಯದಿಂದಂ ಮುನ್ನಡೆದಂತೆ ಅಜಿತನ ಹಿರಿಮೆಗರಿಮೆಗಳು ಕ್ರಮಕ್ರಮವಾಗಿ ಬೆಳೆಯುತ್ತವೆ. ಸಾಕ್ಷಾತ್ ಅಮರಾಧೀಶ್ವರನೇ ಆತನನ್ನು ಕೊಂಡಾಡುವನು.

ಚಕ್ರವರ್ತಿ ಸಗರನ ಅತುಲ ಸಾಮ್ರಾಜ್ಯ ವೈಭವವನ್ನೂ ಅಸೀಮ ವೈರಾಗ್ಯ ಗುಣವನ್ನೂ ಸರಿಸಮವಾಗಿ ವರ್ಣಿಸಿರುವನು. ಚಕ್ರಧರನಾದ ಸಗರನು ಶರತ್ಕಾಲದಲ್ಲಿ ಹೇಗೆ ದಿಗ್ವಿಜಯವನ್ನು ಕೈಕೊಂಡನೆಂಬ ವರ್ಣನೆಯಂತೂ ಅವನ ಪರಾಕ್ರಮದ ಪರಾಕಾಷ್ಠೆಯನ್ನು ಪ್ರಕಟಪಡುವಂತಿದೆ. "ಶರದಂಬಂದುದು ನಮಗಿದು ಶರದುಂ...... "ಎಂದು ಚಮತ್ಕಾರವಾಗಿ ಪೀಠಿಕೆಯನ್ನು ಹಾಕಿ ವಿಜಯ ಸಿಂಧುರದ ಬೆನ್ನಿನಲ್ಲಿ

-೭-

ಮಂಡಿಸಿ ಹೊರಟ ಚಕ್ರವರ್ತಿಯ ದಿಗ್ವಿಜಯ ವೈಭವವನ್ನು ಕವಿ ಪದ್ಯಗಳಲ್ಲಿಯೇ ಪ್ರಭಾವಶಾಲಿಯಾಗಿ ಚಿತ್ರಿಸಿರುವನು.

ಬತ್ತಿತೊಜೆ ಬೆಟ್ಟುಗಳ್ ನೆಲೆ
ವತ್ತೆಪಡಲ್ವಡೆ ಮಹಾದ್ರುಮಂಗಳ್ ನೆಲನಂ
ಪೊತ್ತಫಣಿ ತೆಣಜಿತಿರೆ ನಡೆ
ದತ್ತಾಗಳ್ ಸಗರಚಕ್ರವರ್ತಿಯ ಕಟಕಂ॥

ಇಲ್ಲಿ ಕವಿಸಮಯದ ಮುದ್ರೆ ಸ್ಪಷ್ಟ ಆದರೆ ಉತ್ಸಾಹ ಗುಣ ಶೈಲಿಯಲ್ಲಿ ಚೆನ್ನಾಗಿ ಬಿಂಬಿಸಿದೆ. ಈ ರೀತಿ ಚತುರಂಗಸೇನೆಯೊಂದಿಗೆ ಹೊರಟ ಸಗರನು ಷಟ್ಖಂಡ ಭೂಮಂಡಲವನ್ನೆಲ್ಲ ಅದ್ವಿತೀಯವಾಗಿ ಜಯಿಸಿ ಬಂದರೂ ಆತನು ಅಜಿತತೀರ್ಥಂಕರನು ಪರಿನಿರ್ಮಾಣ ಕಲ್ಯಾಣವನ್ನು ಪಡೆದ ಪವಿತ್ರ ಕ್ಷೇತ್ರವನ್ನು ಕಂಡೊಡನೆಯೇ ಭಕ್ತಿಭಾವದಿಂದ ಕೂಡಿ ಆತನನ್ನು ಸ್ಮರಿಸಿ ಕೃತಾರ್ಥನಾಗುವನು.

'ಅಜಿತಪುರಾಣ'ದ ಯಾವ ಆಶ್ವಾಸವನ್ನೇ ಓದಲಿ, ಅಲ್ಲಿ ರನ್ನನ ಪಾಂಡಿತ್ಯ ತಾನೆ ತಾನಾಗಿ ವಿಜೃಂಭಿಸಿದೆ. ಬಗೆ ಬಗೆಯ ಶಬ್ದ ಅರ್ಥಾಲಂಕಾರಗಳ ಪ್ರಯೋಗ ವೈಖರಿಯಾಗಲಿ, ನಾಟ್ಯಶಾಸ್ತ್ರ ಮುಂತಾದ ಶಾಸ್ತ್ರಗಳ ಜ್ಞಾನವಾಗಲಿ ರನ್ನ ತನ್ನ ಪ್ರತಿಭೆಯನ್ನು ಬೆಳಗಿದ್ದಾನೆ. " ಈ ದೊರೆಯ ಕಥಾನಾಯಕನೀ ದೊರೆಯ ಮಹಾ ಪ್ರಸಿದ್ಧಕವಿ ಪೋದರೊಳಿಲ್ಲಾದರೊಳಿಲ್ಲಪ್ಪರೊಳಿಲ್ಲೀ ದೊರೆಯವು ಕೃತಿಗಳಿಲ್ಲ ಸಂದಲಕೃತಿಗಳ್" ಎಂಬ ಆತನ ಹೇಳಿಕೆಯಲ್ಲಿ ಅತಿಶಯೋಕ್ತಿಯಿದ್ದರೂ ಅಲ್ಪ ಪ್ರಮಾಣದ ಕಥಾವಸ್ತುವನ್ನು ರನ್ನ ಸಾಹಿತ್ಯಜ್ಞರೂ ಜೈನಶಾಸ್ತ್ರಜ್ಞರೂ ಒಪ್ಪುವಂತೆ ಹಿಗ್ಗಿಸಿ ಹೇಳಿರುವ ಸಂಗತಿ ಮುಖ್ಯವಾದ್ದು.

ರನ್ನನ ಶೈಲಿ ಶಕ್ತಿ ಸಂಪನ್ನವಾದ್ದು, ಅರ್ಥವ್ಯಕ್ತಿಗುಣ ಸಂಪನ್ನವಾದ್ದು ಎನ್ನುವದು ಅಜಿತಪುರಾಣದಿಂದಲೂ ನಮಗೆ ಮನವರಿಕೆಯಾಗುತ್ತದೆ. ಆತ ಕಾವ್ಯಾರಂಭದಲ್ಲಿ ಹೇಳಿಕೊಂಡಿರುವ ಕೆಲವು ಪದ್ಯಗಳಿಂದ ಆತನ ಕಾವ್ಯ ದೃಷ್ಟಿಯಲ್ಲಿ ಆತನ ಮಾನದಂಡಗಳು ಯಾವುವು, ಅಭಿರುಚಿ ವಿಶೇಷಗಳಾವುವು, ಸಾಧನೆ ಸಾಮರ್ಥ್ಯಗಳು ಎಂತಹವು ಎನ್ನುವುದು ಸ್ಪಷ್ಟವಾಗಿ ಪ್ರತಿಫಲಿಸಿವೆ. ಇದಕ್ಕೆ ಅನುಗುಣವಾಗಿ ಆತನು ಕಾವ್ಯದಲ್ಲಿ ಆ ಗುಣವಿಶೇಷಗಳನ್ನು ಸಾಧ್ಯವಿದ್ದ ಮಟ್ಟಿಗೆ ಪ್ರಯತ್ನಗಳನ್ನು ಮಾಡಿದ್ದಾನೆ. ಅರ್ಥಪುಷ್ಟಿ, ರಸಸೃಷ್ಟಿಗಳಿಗೆ ಆತ್ಮ ಮಹತ್ವವನ್ನು ಕೊಟ್ಟಿದ್ದಾನೆ ಎಂಬುದಕ್ಕೆ ಅಲ್ಲಿಯೂ ಕೆಲವು ಸನ್ನಿವೇಶಗಳು ಸಾಕ್ಷ್ಯಹೇಳುತ್ತಿವೆ. ಶಾಸ್ತ್ರ ವಿಚಾರದ ಭಾಗಗಳನ್ನು ಅಲ್ಲಲ್ಲಿ ಸವರಿಹಾಕಿದರೆ, ಅಲ್ಲಿಯ ಶುದ್ಧಕಾವ್ಯ ಹೃದ್ಯವಾದುದು. ಕವಿ ಶಕ್ತಿಗೆ ದ್ಯೋತಕವಾದುದು. ಭಕ್ತಿಯಾಗಲಿ, ವೈರಾಗ್ಯವಾಗಲಿ, ಮನುಷ್ಯ ಪ್ರಕೃತಿಯಾಗಲಿ, ಬಾಹ್ಯ ಪ್ರಕೃತಿಯಾಗಲಿ,

–೮–

ಅನುರೂಪವಾದ ಭಾಷೆಯಲ್ಲಿ ಅವುಗಳ ನಿರೂಪಣೆ ವರ್ಣನೆಗಳನ್ನು ಕವಿ ಸಮರ್ಥವಾಗಿ ಮಾಡಿಕೊಟ್ಟದ್ದಾನೆ. ಶೈಲಿಯ ಮಾರ್ಗ ದೇಸಿಗಳಲ್ಲಿ, ಅವುಗಳ ಸಮ್ಮಿಶ್ರಣದಲ್ಲಿ ಪಂಪನ ಹಾಗೆ ಈತನಿಗೂ ಸಮ ಸಮವಾದ ಪ್ರಭುತ್ವವಿದೆ. ಜೈನಶಾಸ್ತ್ರ ವಿಚಾರ

ಬಂದಾಗ ಆತನ ಅನಿವಾರ್ಯವಾಗಿ ಎಂಬಂತೆ ಸಂಸ್ಕೃತ ಪದಪುಂಜಗಳನ್ನು ರಾಶಿರಾಶಿಯಾಗಿ ಅಡಕಿರುತ್ತಾನೆ. ಪ್ರಕ್ರಿಯೆಯ ದೆಸೆಯಿಂದಾಗಿ ಇದು ಕೆಲಮಟ್ಟಿಗೆ ಸಹಜವೂ ಆಗಿದೆ. ಮಾರ್ಗಕ್ಕೆ ಈ ಭಾಗಗಳ ಜತೆಗೆ ನೃತ್ಯಗೀತಾದಿಗಳ ಸಂಬಂಧವಾದ ಭಾಗಗಳನ್ನೂ ಗಮನಿಸಬಹುದು.

**ಆಕರ ಗ್ರಂಥಗಳು:**

೧. ಪಂಪಭಾರತ ಆ-೧, ಪದ್ಯ-೨

೨. ಪಂಪಭಾರತ ಆ-೪, ಪದ್ಯ-೧೧

೩. ಪಂಪಭಾರತ ಆ-೫, ಪದ್ಯ-೨೫

೪. ಪಂಪಭಾರತ ಆ-೧, ೨೪-ಗದ್ಯ

೫. ಪಂಪಭಾರತ ಗದ್ಯಾನುವಾದ ಪುಟ -೨೧೫.ಎನ್ ಅನಂತರಂಗಾಚಾರ್

೬. ತಪೋನಂದನ: ಪಂಪನಲ್ಲಿ ಭವ್ಯತೆ, ಪುಟ:೪೭, ೫೪

೭. ಎ.ಶಾಂತರಾಜಶಾಸ್ತ್ರಿ : ರನ್ನ ಮತ್ತು ಅಜಿತತೀರ್ಥಂಕರ ಪುರಾಣ ತಿಲಕ

೮. ಅಜಿತತೀರ್ಥಂಕರ ಪುರಾಣ ತಿಲಕ ಕವಿಕಾವ್ಯ ಪರಿಚಯ

೯. ಶಾಂತಿನಾಥ ದಿಬ್ಬದ: ವಾಗ್ದೇವಿಯ ಭಂಡಾರದ ಮುದ್ರೆ

೧೦.ಪ್ರಬುದ್ಧ ಕರ್ನಾಟಕ -೫೩,೫೪ ಪುಟ ಸಂಖ್ಯೆ: ೭೨

* * *



ಇಹದ ಪರಿಮಳ

ಕಾಡ ಹಾದಿಯ ಹೂಗಳು

'ಇಹದ ಪರಿಮಳ' ಕೃತಿಯ ಶೀರ್ಷಿಕೆ ಪ್ರಧಾನತೆ ಇರುವುದೇ ಹೂವಿನ ಸೌಂದರ್ಯದ ಮೂಲದಲ್ಲಿ. ಹೂವಿನ ಸೌಂದರ್ಯವು ವಿಕಾಸ ರೂಪದ ನಿಧಿಯಾಗಿ ಅರಳಿ, ತನ್ನೊಡಲ ಮಧು ಮಕರಂದವಾಗಿ ಗಾಳಿಯಲಿ ಕರಗಿ, ಆ ಗಂಧ ಹರಡುವ ಪರಿ ಸೃಷ್ಟಿ ಕ್ರಿಯೆಯ ವಿಸ್ಮಯಕಾರಿ ನಿತ್ಯ ಕ್ರಿಯೆಗಳಲ್ಲೊಂದು. ಕಾಡು ಹಾದಿಯ ಹೂಗಳು ಯಾರದೋ ಒಲುಮೆಯ ಮುಡಿಗೊ, ದೇವರ ಗುಡಿಗೊ ಅಥವಾ ಯಾರದೋ ಕೊರಳಿಗೆ ಅರಳಿರುವ ಹೂವುಗಳಲ್ಲ. ಕಾಡಿನ ಹಾದಿಯ ತುಂಬಾ ಅರಳಿನಿಂತಿರುವುದು ಅವುಗಳ ಸ್ವಂತಿಕೆಯ ಜೀವಂತಿಕ ಬೇರುಗಳಿಂದ. ಯಾರೊಬ್ಬರ ನಿರೀಕ್ಷೆಯೂ ಇಲ್ಲದೆ ತನ್ನಷ್ಟಕ್ಕೇ ತಾನೇ ಅರಳಿ ನಿಂತಿವೆ.

ಅವುಗಳ ಸೌಂದರ್ಯ ಜಾಗತಿಕ ಮಾರುಕಟ್ಟೆಗೆ ಅಪರಿಚಿತವಾಗಿದ್ದರೂ, ಅವುಗಳ ಭಿನ್ನ ರುಚಿಯ ಮಕರಂದದ ಗಂಧ ಮಾತ್ರ ಹೆಜ್ಜೇನು, ಕಿರು ಜೇನುಗಳಿಗೆ ಪರಿಚಯವಾದದ್ದು. ಅಂತಹ ಅಂತಃಸ್ಥ ಶಕ್ತಿಯನ್ನು ಈ ಕೃತಿ ಹೊಂದಿದೆ. ಹೊಸತನ, ಹಳೆಸತ್ವದ ಬೇರಿನ ನಾಡಿಶಕ್ತಿಯು ಈ ಕೃತಿಯಲ್ಲಿವೆ. ಭಿನ್ನ ಆಯಾಮಗಳು, ಭಿನ್ನ ಒಳನೋಟಗಳು, ಕಾಡಿನ ಹೂಗಳಂತೆ ವೈವಿಧ್ಯಮಯವಾಗಿವೆ. ಲೇಖನಗಳ ಜೀವಂತಿಕೆ ರೂಪ ಇರುವುದೇ ಮಕರಂದದ ಜೇನಿನ ಸೃಜನರೂಪದ ಮಧುಕರ ರುಚಿಯಿಂದ. ಅಂತಹ ಜೀವಂತಿಕೆಯ ಕ್ರಿಯೆಯನ್ನು ಈ ಕೃತಿ ತನ್ನೊಡಲೊಳಗೆ ಹಿಡಿದಿಟ್ಟುಕೊಂಡಿದೆ. ಕನ್ನಡ ಸಾಹಿತ್ಯದ ಎಲ್ಲ ಕಾಲಘಟ್ಟದ ಮಜಲುಗಳನ್ನು, ಭಿನ್ನ ಭೇದವಿಲ್ಲದ ನೆಲೆಯಲ್ಲಿನ ವಿಷಯವನ್ನು ಈ ಕೃತಿ ಹೊಂದಿರುವುದೇ ಈ ಕೃತಿಯ ಭಿನ್ನತೆ.

ಡಾ. ಪುರುಷೋತ್ತಮ ಡಿ.

ಪ್ರಕಾಶನ, ಮೈಸೂರು.

ISBN 938424054-0

9 789384 240547